
ಮನೆಯನ್ನು ಪೂರ್ಣ ಕಟ್ಟಿದ ಮೇಲೆ ಒಂದು ದಿನ ಕೆಂಚಣ್ಣ ತಾರಸಿಯ ಮೇಲೆ ನಿಂತು ನೋಡಿದ! ಎದುರಿನ ಮನೆ, ಅಕ್ಕಪಕ್ಕದ ಮನೆಗಳ ತಾರಸಿಗಳೆಲ್ಲಾ ಎಷ್ಟು ಚೆನ್ನಾಗಿ ಕಾಣುತ್ತವೆ! ಎಂದು ಅಚ್ಚರಿ ಪಟ್ಟ. ಇದರ ಮೇಲೆ ಇನ್ನೊಂದು ಮಹಡಿ ಕಟ್ಟಿಸಿಕೊಂಡರೆ ಆಚೆಯ ರಸ್ತೆಯೂ ಕಾಣಬಹುದಲ್ಲ? ಅನ್ನಿಸಿ ಮೇಲೆ ಇನ್ನೊಂದು ಮಹಡಿ ಕಟ್ಟಿಕೊಂಡ. ಅವನಿಗೆ ಇನ್ನೂ ಖುಷಿ ಆಯಿತು.

ಮನೆಗೆ ಬಂದ ನೆಂಟರೊಬ್ಬರು, 'ಇದರ ಮೇಲೆ ಮತ್ತೊಂದು ಮಹಡಿ ಕಟ್ಟಿಕೋ, ಆಚೆ ಬೀದಿಯೂ ಕಾಣುತ್ತದೆ' ಎಂದರು. 'ಹೌದಲ್ಲ?' ಎಂದುಕೊಂಡ ಕೆಂಚಣ್ಣ, ಇನ್ನೊಂದು ಅಂತಸ್ತು ಕಟ್ಟಿಕೊಂಡ. ಆಮೇಲೆ ಒಬ್ಬರು ಸ್ನೇಹಿತರು ಹೇಳಿದರು: 'ಇದರ ಮೇಲೆ ಇನ್ನೊಂದು ಮಹಡಿ ಕಟ್ಟಿಕೋ... ಆಗ ಅದೇ, ನಿಮ್ಮ ಆ ದಾಯಾದಿ ಮನೆಯೂ ಕಾಣುತ್ತದೆ.' ಅದೂ ಆಗಲಿ ಎಂದ ಕೆಂಚಣ್ಣ. ಈಗ ಅವನಿಗೆ ತನ್ನ ನೆಂಟರ ಮನೆಗೆ ಯಾರು ಬಂದರು, ಯಾರು ಹೋದರು ಎನ್ನುವುದೆಲ್ಲಾ ತಿಳಿಯುತ್ತಿತ್ತು. ಮತ್ತೊಬ್ಬರು, 'ಇದರ ಮೇಲೆ ಇನ್ನೊಂದು ಮಹಡಿ ಕಟ್ಟು, ಈ ಊರಿನ ಬಸ್ ನಿಲ್ದಾಣವೂ ಕಾಣುತ್ತದೆ' ಎಂದರು. ಮೇಲೆ ಮತ್ತೊಂದು ಅಂತಸ್ತು ಕಟ್ಟಿಕೊಂಡ. ಮತ್ತೊಬ್ಬರು, 'ಇನ್ನೂ ಒಂದು ಅಂತಸ್ತು ಕಟ್ಟು, ಆ ಬೆಟ್ಟದ ತುದಿಯೂ ಚೆನ್ನಾಗಿ ಕಾಣುತ್ತದೆ' ಎಂದರು.



ಹೀಗೇ ಪಕ್ಕದ ಊರು, ಆ ಮೇಲೆ ಮೈಸೂರಿನ ಅರಮನೆ, ಶ್ರವಣಬೆಳಗೊಳದ ಗೊಮ್ಮಟೇಶ್ವರ, ಹಳೇಬೀಡು ಬೇಲೂರಿನ ಶಿಲಾಬಾಲಿಕೆ, ಬೆಂಗಳೂರಿನ ವಿಧಾನಸೌಧ, ಮಂಗಳೂರಿನ ಬಂದರು, ದೆಹಲಿಯ ಕೆಂಪುಕೋಟೆ, ಆಗ್ರಾದ ತಾಜ್ ಮಹಲ್, ಕೊನೆಗೆ ಅರಬ್ಬಿ ಸಮುದ್ರ ನೋಡಬಹುದು ಎಂದು ಅಂತಸ್ತಿನ ಮೇಲೆ ಅಂತಸ್ತು ಕಟ್ಟುತ್ತ ಹೋದ.

ಒಂದಿನ ಅಮೆರಿಕ ನೋಡುವಂತಾಗಲು ಇನ್ನೂ ಎಷ್ಟು ಅಂತಸ್ತುಗಳನ್ನು ಕಟ್ಟಬೇಕಾಗಬಹುದು? ಎಂದು ಯೋಚಿಸುತ್ತಾ ಕೆಂಚಣ್ಣ ಕೊನೆಯ ಅಂತಸ್ತಿನ ತಾರಸಿ ಮೇಲೆ ನಿಂತುಕೊಂಡಿದ್ದ. ಕೆಳಗಡೆ ಭೂಮಿ ಸಣ್ಣದಾಗಿ ಕಂಪಿಸಲು ಆರಂಭವಾಯಿತು. ಕೆಂಚಣ್ಣನ ಬಹು ಮಹಡಿ ಮನೆ ಅಲುಗಾಡಲು ಶುರುವಾಯಿತು. ಅಲುಗಾಡಿ ಅಲುಗಾಡಿ ಕೆಂಚಣ್ಣನ ಎತ್ತರದ ಮನೆ ಬಿದ್ದು ಬಿಟ್ಟಿತು. ಕೆಂಚಣ್ಣನೂ ನೆಲಕ್ಕೆ ಅಪ್ಪಳಿಸಿದ. ಎಲ್ಲರೂ ಕೆಂಚಣ್ಣನನ್ನು ನೋಡಿ, 'ಇವನ ದುರಾಸೆಗೆ ಸಿಕ್ಕ ಫಲ ಇದು' ಎಂದು ಆಡಿಕೊಂಡರು. ●

ಕಲೆ: ಗಣೇಶ್ ಆಚಾರ್ಯ